ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

ಋಷಿಗಳು ಹೇಳಿಕೊಟ್ಟಂತೆ
ನಾವು ಧ್ಯಾನವನ್ನು ಕಲಿಸುತ್ತೇವೆ.

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
★ ಪ್ರೀತಿ ನಮ್ಮ ಸ್ವಭಾವ.
★ ಮೌನ ನಮ್ಮ ಭಾಷೆ.
★ ಧ್ಯಾನ ನಮ್ಮ ಮಾರ್ಗ.
★ ಈ ಪ್ರಪಂಚ ನಮ್ಮ ಆಶ್ರಮ.
★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

# ತಪೋವಾಣಿ

ಸಂಪುಟ 16 ಸಂಚಿಕೆ 9 ಸೆಪ್ಟೆಂಬರ್ 2019 ರೂ.25

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

ಅನು: ಚಂಪಾ

(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು – ಜನವರಿ 1992ರ ಸಂಚಿಕೆ)

ಜನರಿಗೆ ದಿಢೀರ್(instant) ಪದಾರ್ಥಗಳ ಹುಚ್ಚು ಹಿಡಿದಿದೆ, ಉದಾಹರಣೆಗೆ ಕಾಫಿ! ಭಾಷೆಗಳನ್ನು 21 ದಿನಗಳಲ್ಲಿ ಕಲಿಸಲಾಗುತ್ತದೆ, ಆಸ್ತಮಾವನ್ನು 14 ದಿನಗಳಲ್ಲಿ ವಾಸಿ ಮಾಡಲಾಗುತ್ತದೆ, ದೇಹದ ತೂಕ ಏಳು ದಿನಗಳಲ್ಲಿ ಇಳಿಸಲಾಗುತ್ತದೆ! ಬೇಡಿಕೆ ಹೆಚ್ಚಿಸುವುದಕ್ಕಾಗಿ ಪ್ರಚಾರಕರು ಏನೆಲ್ಲಾ ಹೇಳುತ್ತಾರೆ. ಇಂತಹ ಘೋಷಣೆಗಳು ಮತ್ತು ಪ್ರಚಾರಗಳು ಆಧ್ಯಾತ್ಮ ಮಾರುಕಟ್ಟೆಯಲ್ಲೂ ಮೊದಮೊದಲು ಕೆಲವು ಜನರನ್ನು ಸೆಳೆಯಬಹುದು, ಆದರೆ ಅಲ್ಲಿ ದಿಢೀರ್ ನಿರ್ವಾಣ ಅಥವಾ ಸಮಾಧಿ ಸಾಧ್ಯವಿಲ್ಲ. ಅವುಗಳನ್ನು ಮಾರಲೂ ಸಾಧ್ಯವಿಲ್ಲ ಕೊಳ್ಳಲೂ ಸಾಧ್ಯವಿಲ್ಲ. ನಾವು ಅದಕ್ಕಾಗಿ ಕಷ್ಟ ಪಡಬೇಕು, ಶಿಸ್ತಿಗೆ ಒಳಪಡಬೇಕು ನಂತರ ಪರಿಣಾಮಕ್ಕಾಗಿ ತಾಳ್ಮೆಯಿಂದ ಕಾಯಬೇಕು. ಜನರು ಈ ಹೇಳಿಕೆಯಿಂದ ಆಕರ್ಷಿತರಾಗಲಿ, ಬಿಡಲಿ, ಇದೇ ಸತ್ಯ. ಇದನ್ನೇ ನಾನು ಆಗಿಂದಾಗ್ಗೆ ನನ್ನ ಸಾಧಕ-ಸ್ನೇಹಿತರಿಗೆ ಹೇಳಲು ಪ್ರಯತ್ನಿಸುವುದು. ಶ್ರಮಿಸಿ; ಧ್ಯಾನ ಮಾಡಿ; ಮರುದಿನವೇ ಕುಂಡಲಿನಿ ಮೇಲಕ್ಕೇರಬಹುದೆಂದು ನಿರೀಕ್ಷಿಸಬೇಡಿ; ಮುಂದಿನ ವಾರವೇ ಎಲ್ಲ ಸಮಸ್ಯೆಗಳಿಗೂ ಪರಿಹಾರ ಸಿಗಬಹುದು ಎಂದುಕೊಳ್ಳಬೇಡಿ. ಕಷ್ಟಪಡದೆ, ಪ್ರಯತ್ನವಿಲ್ಲದೆ ದಿಢೀರ್ ಸಮಾಧಿಯನ್ನು ಯಾರಾದರೂ ನಿರೀಕ್ಷಿಸುತ್ತಿದ್ದರೆ, ನಾನು ಹೇಳುವುದಿಷ್ಟೆ, ಪ್ರತ್ಯಕ್ಷಾನುಭವವೇ ಬೇರೆ.

ನಾನು ಮಾತನಾಡುವ ಹಾಗೂ ಬರೆಯುವ ಶೈಲಿಯನ್ನು ನಿಖರ ಹಾಗೂ ವಿಷಯಕ್ಕೆ ಸೀಮಿತ ಎಂದು ನನ್ನ ಸ್ನೇಹಿತರೊಬ್ಬರು ಹೊಗಳಿದರು. ನನಗೆ ಅದರ ಅರಿವಿಲ್ಲ. ನಿಜವಾಗಿಯೂ ನಾವು ಹೇಳಬೇಕೆಂದಿರುವುದನ್ನು ಹೇಳಲೆತ್ನಿಸಿದಾಗ ಹಾಗೂ ಶಬ್ದಗಳಿಂದ ಮತ್ತು ಬುದ್ಧಿಮತ್ತೆಯಿಂದ ಇತರರನ್ನು ಮೆಚ್ಚಿಸಲೆತ್ನಿಸದಿದ್ದಾಗ, ಜನರಿಗೆ ಹೀಗೇ ಅನಿಸುವುದೇನೋ. ನಾನು ಪ್ರಾಮಾಣಿಕ ಮತ್ತು ಸತ್ಯವಂತನಾಗಿರಲು ಬಯಸುತ್ತೇನೆ.

1992ರ ಮೇ 18ರಂದು ನಾನು 'ಆಶ್ರಮ'ವನ್ನು ಸೇರಿ ಹತ್ತು ವರ್ಷಗಳಾಗುತ್ತವೆ. ನನಗೆ ಅಮರರವರು ದೀಕ್ಷೆ ಕೊಟ್ಟು ನನ್ನನ್ನು ಕೃಷ್ಣಾನಂದ ಎಂದು ಕರೆದರು. ನಾನು ಈ ಮಾರ್ಗಕ್ಕೇ ಅಂಟಿಕೊಂಡಿದ್ದು ಇಲ್ಲಿಯ ಕೆಲಸವನ್ನು ಮುಂದುವರಿಸುತ್ತಿರುವುದಕ್ಕೆ ನನಗೆ ಸಂತೋಷವಿದೆ. ಈಗ ಋಷಿಗಳು ತೋರಿಸುತ್ತಿರುವ ಮುಂದಿನ ಹೆಜ್ಜೆ ಇಡುವುದಕ್ಕೆ ಸಮಯ ಬಂದಿದೆ, ಅದೇ ವಿಧ್ಯುಕ್ತ ಸಂನ್ಯಾಸ. ಮುಂದಿನ ಯೋಜನೆಗಳು ಮತ್ತು ಇತರ ವಿವರಗಳು ಋಷಿಗಳಿಗೆ ಮಾತ್ರ ತಿಳಿದಿರುತ್ತದೆ. ನಾನು ಒಂದು ಸಾಧನವಷ್ಟೆ. ನನ್ನನ್ನು ಆಶ್ರಮಕ್ಕೆ ಸೇರಿಸಿಕೊಂಡಾಗ ನನ್ನ ಗುರುಗಳು ಕಾವಿಯನ್ನು ಧರಿಸಬೇಡವೆಂದು ಹೇಳಿದ್ದರು. ಈಗ ಅವರಿಂದ ಆದೇಶಕ್ಕಾಗಿ ಕಾಯುತ್ತಿದ್ದೇನೆ.

ಧ್ಯಾನ ಯಜ್ಞದಲ್ಲಿ ನನ್ನ ಸ್ನೇಹಿತರು ಮತ್ತು ಸಾಧಕರೆಲ್ಲರೂ ಭಾಗವಹಿಸಬೇಕೆಂದು ನಾನು ಬಯಸುತ್ತೇನೆ. ನಮ್ಮ ಪ್ರಜ್ಞೆಯನ್ನು ಸುಲಭವಾಗಿ ವಿಸ್ತರಿಸಿಕೊಳ್ಳಲು ಮತ್ತು ಮೌನವಾಗಿ ಪ್ರೀತಿಯಿಂದ ಭಗವಂತನ ಸೇವೆ ಮಾಡಲು ಇದೊಂದು ಸುಸಂದರ್ಭ. ಈ ಸಮಯದಲ್ಲಿ, ಶಾಂತಿಗಾಗಿ ಮಾಡುವ ಧ್ಯಾನದಲ್ಲಿ ಹಳೆಯ ಮತ್ತು ಹೊಸ ಸಾಧಕರೆಲ್ಲರೂ ಒಟ್ಟುಗೂಡುವಂತಾಗಲಿ. ಭಗವಂತ ಎಲ್ಲರನ್ನೂ ಆಶೀರ್ವದಿಸಲಿ. ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560077. ಭಾರತ.
✆ 99000 75280 (ಬೆಳಗ್ಗೆ 10ರಿಂದ ಸಂಜೆ 5)
ಇ-ಮೇಲ್: info@lightagemasters.com ವೆಬ್‌ಸೈಟ್: www.lightagemasters.com